

ಶಾಲೆಯಲ್ಲಿ ನಾವು ಓದುತ್ತಿದ್ದ ಪಂಜಾಬಿ, ಹಿಂದಿ ಮತ್ತು ಚರಿತ್ರೆಯ ಪಠ್ಯಪುಸ್ತಕಗಳಲ್ಲಿ ಈ ಮೂವರು ದೇಶಭಕ್ತರ ಬಲಿದಾನದ ಕಥೆಗಳಿದ್ದವು. ನಮ್ಮ ಪಿಟಿ ಮಾಸ್ತರ್ ಕೂಡಾ, ನಾವು ಈ ಹುತಾತ್ಮರಂತೆ ದೈಹಿಕವಾಗಿ ಶಕ್ತರಿರಬೇಕು ಎನ್ನುತ್ತಿದ್ದರು; ಪ್ರತಿ ಆಟ ಮತ್ತು ವ್ಯಾಯಾಮಗಳಲ್ಲಿ ಭಾಗಿಯಾಗಲು ಪ್ರೋತ್ಸಾಹಿಸುತ್ತಿದ್ದರು.

ದಶಕ ದಶಕಗಳ ನಂತರ ಪಂಜಾಬಿಗೆ ಮತ್ತೆ ಭೇಟಿಕೊಡುತ್ತಿದ್ದೆ; ಬೆಂಗಳೂರಲ್ಲಿ ಹುಟ್ಟಿ ಬೆಳೆದ ಮಗಳಿಗೆ, ಪತ್ನಿಗೆ ಹುಸೇನಿವಾಲ ತೋರಿಸಲು ಬಯಸಿದೆ.

ಅಮೃತಸರದಿಂದ ಫಿರೋಜ್‌ಪುರ್‌ಗೆ ಬಂದು, ಅಲ್ಲಿಂದ ಗಾಡಿಯಲ್ಲಿ ಹೊರಟ ನಾವು ಸೇತುವೆ ಮತ್ತು ಬಿ.ಎಸ್.ಎಫ್. ಚೆಕ್‌ಪೋಸ್ಟ್ ತಡೆಯನ್ನು ದಾಟಿ ಹುಸೇನಿವಾಲದ ಹುತಾತ್ಮರ ರಾಷ್ಟ್ರೀಯ ಸ್ಮಾರಕಕ್ಕೆ ಪ್ರವೇಶಿಸಿದ್ದೆವು. ಅವರ ಧೈರ್ಯ, ಶೌರ್ಯ, ತಾಯಿನಾಡಿಗಾಗಿ ಪರಮತ್ಯಾಗದ ಶಿಲುಬೆಗೇರಿದ ಕ್ರಾಂತಿಕಾರಿ ಬದುಕು, ನಮ್ಮೊಳಗೆ ನೂರೊಂದು ಭಾವನೆಗಳನ್ನು ಮೂಡಿಸಿತ್ತು. ಸ್ಮರಣೆಯ ತಾಣದ ಆವರಣದೊಳಗೆ ಪ್ರವೇಶಿಸಿದಂತೆ, 'ಸರ್ಫರೋಷ್ ಕೀ ತಮನ್ನ ಅಬ್ ಹಮಾರೆ ದಿಲ್ ಮೆ ಹೈ' ಸಾಲುಗಳನ್ನು ಫಲಕವೊಂದರ ಮೇಲೆ ಓದಿದೆವು, ಮೈ ನವಿರೆದ್ದಿತ್ತು. 'ದೇಶಕ್ಕಾಗಿ ಹುತಾತ್ಮನಾಗುವ ಆಸೆ ನಮ್ಮ ಎದೆಯಲ್ಲಿ' ಎಂಬ ಹಾಡದು. ದೇಶಕ್ಕಾಗಿ ಮಡಿದ ರಾಮ್ ಪ್ರಸಾದ್ ಬಿಸ್ಮಿಲ್ ಅವರ ಗೀತೆ ಅದು. ಅವರ ಅದೆಷ್ಟು ಗೀತೆಗಳು ಈಗಲೂ ಮೈ ನವಿರೇಳಿಸುತ್ತವೆ: 'ಏಕ್ ಬಾರ್ ಇಸ್ ರಾಹ್ ಪೆ ಮರನಾ, ಸೌ ಜನಮೋ ಗಿ ಸಮಾನ್ ಹೈ' ಎನ್ನುತ್ತಾರೆ. 'ಒಮ್ಮೆ ಈ ಹಾದಿಯಲ್ಲಿ ಮಾತೃಭೂಮಿಗಾಗಿ ಮರಣಿಸುವುದು ನೂರು ಜನುಮಗಳಿಗೆ ಸಮಾನ' ಎಂದು ಅವರ ಭಾವನೆಯಾಗಿತ್ತು. 'ದೇವರೇ, ಭಾರತದಲ್ಲಿ ನೂರು ಬಾರಿ ಹುಟ್ಟುವಂತೆ ಮಾಡು, ನೂರು ಬಾರಿ ದೇಶಸೇವೆಯಲ್ಲಿ ಮರಣಿಸುವಂತೆ ಕರುಣಿಸು' ಎಂದಿದ್ದರು.




ಸ್ಮರಣೆಯ ತಾಣದಲ್ಲಿ ಫಲಕದ ಮೇಲೆ 'ಸರ್ಫರೋಷ್ ಕೀ ತಮನ್ನ ಅಬ್ ಹಮಾರೆ ದಿಲ್ ಮೆ ಹೈ'... ದೇಶಕ್ಕಾಗಿ ಮಡಿದ ರಾಮ್ ಪ್ರಸಾದ್ ಬಿಸ್ಮಿಲ್ ಅವರ ಗೀತೆಯ ಸಾಲುಗಳು

ಭಗತ್ ಸಿಂಗ್, ರಾಜ್‌ಗುರು ಮತ್ತು ಸುಖ್‌ದೇವ್ ಅವರನ್ನು ಬ್ರಿಟಿಷ್ ಪೊಲೀಸು ಅಧಿಕಾರಿ ಜಾನ್ ಸೌಂಡರ್ಸ್ ಅವರನ್ನು 1928ರ ಡಿ. 17ರಂದು ಕೊಂದ ಅಪರಾಧದ ಮೇಲೆ ಕಟಕಟೆಯಲ್ಲಿ ನಿಲ್ಲಿಸಿ, ಅವರಿಗೆ ಮರಣದಂಡನೆ ವಿಧಿಸಿದ್ದರು. ದಂಗೆಯಾಗಬಹುದೆಂಬ ಭೀತಿಯಲ್ಲಿ, ಗೊತ್ತಾದ ದಿನಕ್ಕೆ ಒಂದು ದಿನ ಮೊದಲೇ, ಮಾರ್ಚ್ 23, 1931ರ ಸಂಜೆಯೇ ಅವರನ್ನು ನೇಣಿಗೇರಿಸಿದ್ದರು. ಜೈಲು ಅಧಿಕಾರಿಗಳು ಜೈಲಿನ ಹಿಂಬದಿಯ ಗೋಡೆ ಒಡೆದು, ಗುಟ್ಟಾಗಿ ಅವರುಗಳ ಮೃತದೇಹವನ್ನು ಸಟ್ಲೆಜ್ ನದಿಯ ದಂಡೆಯ ಇದೇ ಹುಸೇನಿವಾಲಕ್ಕೆ ತಂದು, ಒಂದೇ ಚಿತೆಯಲ್ಲಿ ಮೂವರನ್ನೂ ಸುಟ್ಟರು. ಲಾಹೋರ್ ಜೈಲಿನ ಸುರಕ್ಷತೆಗೆ ಧಾವಿಸಲು ಬಯಸಿದ ಪೊಲೀಸರು, ಅರ್ಧ ಸುಟ್ಟ ದೇಹಗಳನ್ನು ಹಾಗೆಯೇ ನದಿಗೆ ಎಸೆದು ಓಡಿದ್ದರು. ಸಮೀಪದ ಗ್ರಾಮದವರಿಗೆ ವಿಷಯ ಹೇಗೋ ತಿಳಿದು, ನದಿಯಿಂದ ದೇಹಗಳನ್ನು ಹೊರತೆಗೆದು, ಮೂವರ ಅಂತ್ಯಕ್ರಿಯೆಯನ್ನು ಗೌರವದಿಂದ ನಡೆಸಿದ್ದರು. ಸ್ವಾತಂತ್ರ್ಯಾನಂತರ